
# ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೊಂದು ಗ್ರಂಥಸೂಚಿ *

ಎಂ. ಎಸ್. ಶ್ರೀಧರ್

ಇತ್ತೀಚೆಗೆ ಕನ್ನಡದಲ್ಲಿ ಹೆಚ್ಚು ಹೆಚ್ಚು ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು ಮತ್ತು ಲೇಖನಗಳು ಪ್ರಕಟಗೊಳ್ಳುತ್ತಿರುವುದು ಒಂದು ಸ್ವಾಗತಾರ್ಹ ಬೆಳವಣಿಗೆ. ಇದುವರೆವಿಗೆ ಜನಪ್ರಿಯ ವಿಜ್ಞಾನದ ಸುಮಾರು 4000 ಪುಸ್ತಕಗಳು ಮತ್ತು ಹತ್ತಾರು ಸಾವಿರ ಲೇಖನಗಳು ಕನ್ನಡದಲ್ಲಿ ಪ್ರಕಟಗೊಂಡಿರುವ ಅಂದಾಜಿದೆ. ಶ್ರೀಸಾಮಾನ್ಯ ಅಥವ ವಿದ್ಯಾರ್ಥಿ ತನಗೆ ಆಸಕ್ತಿ ಮೂಡಿದ ವಿಷಯದ ಬಗ್ಗೆ ಪ್ರಕಟಿಸಿರಬಹುದಾದ ಪುಸ್ತಕಗಳು ಹಾಗೂ ಲೇಖನಗಳಾವುವು ಎಂದು ತಿಳಿಯಬಯಸಿದರೆ ಅದು ಅಷ್ಟು ಸುಲಭವಾಗಿ ದೊರೆಯುವುದಿಲ್ಲ. ಶಿವರಾಮ ಕಾರಂತರ ವಿಜ್ಞಾನ ಪ್ರಪಂಚ, ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಗಂಗೋತ್ರಿ ಮತ್ತು ಇತ್ತೀಚೆಗೆ ನವಕರ್ನಾಟಕ ಪ್ರಕಟಿಸಿದ ಜ್ಞಾನ ವಿಜ್ಞಾನ ಕೋಶಗಳು ಕೈಗೆ ಸಿಗುವಂತಿದ್ದರೆ ಈ ಆಕರ ಗ್ರಂಥಗಳಿಂದ ಒಂದಿಷ್ಟು ಮಾಹಿತಿ ಪಡೆಯಬಹುದಾಗಿದೆ. ಒಂದು ವಿಷಯದ ಬಗೆಗಿನ ಪುಸ್ತಕಗಳನ್ನು / ಲೇಖನಗಳನ್ನು ಗುರುತಿಸಿ ಆಯ್ದು ಒಂದೆರಡನ್ನು ಕೊಳ್ಳಲು ಸಾಧ್ಯವಾಗದೆ ಸಿಕ್ಕಿದ್ದನ್ನೇ ಓದುವುದರಲ್ಲಿ ತೊಡಗಬೇಕಾದ ಅನಿವಾರ್ಯತೆ ಇದೆ. ಕನ್ನಡದ ಬೆರಳೆಣಿಕೆಯಷ್ಟು ಜನಪ್ರಿಯ ವಿಜ್ಞಾನ ನಿಯತಕಾಲಿಕೆಗಳು ಮತ್ತು ಬಹುತೇಕ ಎಲ್ಲ ದಿನಪತ್ರಿಕೆಗಳಲ್ಲಿ ಬರುವ ವಿಜ್ಞಾನ ಅಂಕಣದ ಮತ್ತು ವಿಶೇಷ ಪುಟದ ಲೇಖನಗಳನ್ನು ಹಿಂದಿನ ಸಂಚಿಕೆಗಳಿಂದ ಒಂದೊಂದಾಗಿ ಪರಿಶೀಲಿಸಬೇಕಾಗುತ್ತದೆ ಹಾಗೂ ಪುಸ್ತಕದ ಅಂಗಡಿಗಳಲ್ಲಿ ಅಥವ ಗ್ರಂಥಾಲಯಗಳಲ್ಲಿ ಸದ್ಯಕ್ಕೆ ದೊರೆಯುವ ಸೀಮಿತ ಪುಸ್ತಕ ಸಂಗ್ರಹದಿಂದ ಆರಿಸಿಕೊಳ್ಳಬೇಕಾಗುತ್ತದೆ. ವಿಜ್ಞಾನ ಪುಸ್ತಕಗಳ ಮತ್ತು ಲೇಖನಗಳ ಒಂದು ಸಮಗ್ರ ಸೂಚಿ ಮತ್ತು ಅದರ ಮುಕ್ತ ದತ್ತಾಂಶದ ಅವಶ್ಯಕತೆ ಓದುಗನ ದೃಷ್ಟಿಯಿಂದಷ್ಟೇ ಅಲ್ಲದೆ ಜನಪ್ರಿಯ ವಿಜ್ಞಾನ ಪ್ರಕಟಣೆಗಳನ್ನು ಕ್ರೋಢೀಕರಿಸುವ ದೃಷ್ಟಿಯಿಂದಲೂ ಅಗತ್ಯ. ಅಲ್ಲದೆ ನೂರಾರು ನಿಯತಕಾಲಿಕೆಗಳ/ಪತ್ರಿಕೆಗಳ ಲೇಖನಗಳು ಪುಸ್ತಕರೂಪದಲ್ಲಿ ಆಗಾಗ್ಗೆ ಪ್ರಕಟಗೊಳ್ಳುತ್ತಲಿವೆ. ಸಾಹಿತ್ಯ ಸಮೃದ್ಧಿಯಾಗುತ್ತಿದ್ದಂತೆ ಅವುಗಳ ಕ್ರೋಢೀಕರಣ, ವಿಮರ್ಶೆ, ಮೌಲ್ಯಮಾಪನ ಇತ್ಯಾದಿ ನಡೆದು ಜೊಳ್ಳು–ಗಟ್ಟಿಗಳನ್ನು ಬೇರ್ಪಡಿಸುವ ಕಾರ್ಯ, ಹಾಗೂ ಪುನರಾವರ್ತನೆಗಳ ತಡೆ ಮತ್ತು ವಿಶ್ವಾಸಾರ್ಹತೆಗಳ ನಿರ್ಧಾರದ ಅವಶ್ಯಕತೆ ಇದೆ. ಈ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕೋದ್ಯಮವಾಗಲಿ, ಗ್ರಂಥಾಲಯಗಳಾಗಲಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಕರ್ನಾಟಕ ಗಣಕ ಪರಿಷತ್, ಕರ್ನಾಟಕ ವೈಜ್ಞಾನಿಕ ಸಾಕ್ಷರತಾ ಪರಿಷತ್, ಕನ್ನಡ ವಿವಿ, ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಪ್ರತಿ



ವರ್ಷವೂ ಅನುದಾನವನ್ನು ಸಮ್ಮೇಳನಕ್ಕೆ ವ್ಯಯಿಸುವ "ಸ್ವದೇಶಿ ವಿಜ್ಞಾನ ಆಂದೋಲನ – ಕರ್ನಾಟಕ" ಇತ್ಯಾದಿ ಸಂಸ್ಥೆಗಳಾವುವೂ ಈ ಬಗ್ಗೆ ಚಿಂತಿಸದಿರುವುದು ದುರದೃಷ್ಟಕರ.

ಇದ್ದುದ್ದರಲ್ಲಿ ಜನಪ್ರಿಯ ವಿಜ್ಞಾನ ಪುಸ್ತಕಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿರುವುದಾಗಿ ಬಹಳದಿನಗಳಿಂದಲೂ ಹೇಳುತ್ತಲೇ ಬಂದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಕಡೆಗೆ ಭಾರತ ಸರ್ಕಾರದ ಡಿಪಾರ್ಟ್‌ಮೆಂಟ್ ಆಫ್ ಸೈನ್ಸ್ ಆಂಡ್ ಟೆಕ್ನಾಲಜಿಯ ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಕೌನ್ಸಿಲ್‌ನಿಂದ ಅನುದಾನ ಪಡೆದು ಈ ಕಾರ್ಯವನ್ನು 1995-96 ರಲ್ಲಿ ಆರಂಭಿಸಿದ್ದು ಸಂತೋಷದ ವಿಷಯ. ಈಗ ಕರಾವಿಪ ಸುಮಾರು 3500 ಕನ್ನಡ ಜನಪ್ರಿಯ ವಿಜ್ಞಾನ ಪುಸ್ತಕಗಳ ಸೂಚಿಯನ್ನು "Annotated bibliography of popular science books in kannada" ಎಂಬ ಶೀರ್ಷಿಕೆಯಲ್ಲಿ 2005 ರಲ್ಲಿ ಪ್ರಕಟಿಸಿ ಐದುನೂರು ಪ್ರತಿಗಳನ್ನು ಉಚಿತವಾಗಿ ವಿತರಿಸುತ್ತಿದೆ. ಇದರಲ್ಲಿ 1996ರ ಸೆಪ್ಟೆಂಬರ್ ಅಂತ್ಯದವರೆಗೂ ರಾಜ್ಯದ ವಿವಿಧ ಗ್ರಂಥಾಲಯಗಳು, ಪ್ರಕಾಶಕರು ಮತ್ತು ವಿದ್ವಾಂಸರ ವೈಯಕ್ತಿಕ ಪುಸ್ತಕ ಸಂಗ್ರಹಗಳಲ್ಲಿರಬಹುದಾದ ಪುಸ್ತಕಗಳನ್ನು ಆಧಾರವಾಗಿಟ್ಟುಕೊಂಡು ಈ ಸೂಚಿ ಸಿದ್ಧಪಡಿಸಲಾಗಿದೆ. ಜನಪ್ರಿಯ ಕನ್ನಡ ವಿಜ್ಞಾನ ಬರಹಗಾರರು, ಸಂಶೋಧಕರು, ಸಮಾಜ ವಿಜ್ಞಾನಿಗಳು ಮತ್ತು ವಿಜ್ಞಾನ ಆಸಕ್ತರಿಗೆ ನೇರವಾಗಿ ತಲಪಿಸುವ ಆಶಯದೊಂದಿಗೆ ಇದನ್ನು ಪ್ರಕಟಿಸಲಾಗಿದೆ. ಹತ್ತು ವರ್ಷಗಳ ನಿರೀಕ್ಷೆಯ ನಂತರ ಬಂದ ಇದನ್ನು ಪ್ರಶಂಸಿಸಬೇಕೋ ಅಥವಾ ದೌರ್ಭಾಗ್ಯ ಎನ್ನಬೇಕೋ ತಿಳಿಯದಾಗಿದೆ. ಮೊದಲನೆಯದಾಗಿ ಇದು ಇಂಗ್ಲೀಷ್‌ನಲ್ಲಿ ಇರುವುದರಿಂದ ಇದರ ಪ್ರಯೋಜನ ಪಡೆಯಬೇಕಾದವರಾರು ಎಂಬುದನ್ನು ಗಮನಿಸಿಯೇ ಇಲ್ಲ. ಇಂಗ್ಲೀಷ್ ಬಾರದವರಿಗೆ ಇದು ನಿಷ್ಪ್ರಯೋಜಕವಾದರೆ, ಶೀರ್ಷಿಕೆಗಳನ್ನು ಲಿಪ್ಯಂತರಮಾಡಿ ಇಂಗ್ಲೀಷನಲ್ಲಿ ಮಾತ್ರ ಕೊಟ್ಟಿರುವುದರಿಂದ ಕನ್ನಡ ಬಾರದರಿಗೂ ಇದರ ತಲೆ ಬುಡ ತಿಳಿಯದಾಗಿದೆ. ಎರಡನೆಯದಾಗಿ ಶೀರ್ಷಿಕೆಯಲ್ಲಿ ನಮೂದಿಸಿರುವಂತೆ ಇದು annotated ಅಲ್ಲ. ಪುಸ್ತಕದ ಬಗ್ಗೆ ಪುಸ್ತಕ ಶೀರ್ಷಿಕೆಗಿಂತಲೂ ಚಿಕ್ಕದಾದ ಅಪೂರ್ಣ ವಾಕ್ಯ ಬರೆದು ಅದನ್ನು annotation ಎನ್ನಲಾಗಿದೆ. ಒಂದು ಸೂಚಿಯಲ್ಲಿರಬೇಕಾದ ಕನಿಷ್ಠ ಗುಣಗಳನ್ನೂ ಹೊಂದದ ಈ ಸೂಚಿ ಅನುದಾನ ಪಡೆದ ಸಂಸ್ಥೆಗೆ ತೋರಿಸಲಿಕ್ಕಾಗಿಯೇ ಹೊಸೆದ ನಾಮಕಾವಸ್ಥೆ ಪ್ರಕಟಣೆಯಂತೆ ಕಾಣುತ್ತದೆ. ಲೇಖಕರ / ಗ್ರಂಥಕರ್ತರ ಸೂಚಿಯಾಗಲಿ, ಪ್ರಕಾಶಕರ ಸೂಚಿಯಾಗಲಿ, ಸರಿಯಾದ ವಿಷಯಾನುಕ್ರಮವಾಗಲೀ ಇಲ್ಲದೆ index ಮತ್ತು content ಗಳಿಗಿರಬಹುದಾದ ಪ್ರಾಥಮಿಕ ವ್ಯತ್ಯಾಸವೂ ತಿಳಿಯದ ಪ್ರಕಟಣೆ ಇದಾಗಿದೆ. ಇದರಲ್ಲಿರುವ ವಿವರಗಳನ್ನು ಕನಿಷ್ಠ ಗಣಕ ಪರಿಷತ್ತಿನ 'ಗ್ರಂಥಸಂಪದ' ಅಥವಾ ಅಂತಹುದೇ ದತ್ತಾಂಶವೊಂದರಲ್ಲಿ ಸೇರಿಸಿ ಇಂಟರ್‌ನೆಟ್‌ನಲ್ಲಿಯಾದರೂ ಒದಗಿಸಿದ್ದರೆ ಇತರರು ಉಪಯೋಗಿಸಿ, ಪರಿಷ್ಕರಿಸಿ ಬೆಳೆಸಬಹುದಾಗಿತ್ತು. ಒಂದೇ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೇಲೆ ತಿಳಿಸಿದ ಹಲವಾರು ಸಂಸ್ಥೆಗಳು ಒಂದಕ್ಕೊಂದು ಒತ್ತಾಸೆಯಾಗಿ ಸಹಕಾರ ತೋರದೆ ವರ್ತಿಸುವುದರಿಂದ ಆಗಬಹುದಾದ ನಷ್ಟಕ್ಕೆ ಇದು ಜ್ವಲಂತ ಉದಾಹರಣೆ. ಒಟ್ಟಿನಲ್ಲಿ ವಿಜ್ಞಾನ ಸಾಹಿತ್ಯದ ಕ್ರೋಢೀಕರಣವಾಗಲಿ, ಲೇಖನಗಳ ಮತ್ತು ಗ್ರಂಥಗಳ ಸೂಚಿಗಳಾಗಲಿ ಓದುಗರಿಗೆ ಇನ್ನೂ ಲಭ್ಯವಿಲ್ಲದಾಗಿದೆ.

**ಕೈಬಿಟ್ಟದ್ದು:** ರಾಜ್ಯ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯನೀತಿ ಪ್ರಕಟಣೆಯಲ್ಲಿ ರಾಜ್ಯಾದ್ಯಂತ ಗ್ರಾಮೀಣ ಪ್ರದೇಶದಲ್ಲಿ ಮಾಹಿತಿ ಕಿಯೋಸ್ಕ್ ಮತ್ತು ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಿ ಎಲ್ಲ ರೀತಿಯ ವೈಜ್ಞಾನಿಕ–ತಾಂತ್ರಿಕ ಮಾಹಿತಿ ಮತ್ತು ನೆರವು ನೀಡುವ ಮಹದೊದ್ದೇಶವಿದೆ. ಸಾರ್ವಜನಿಕ ಗ್ರಂಥಾಲಯ ಇಲಾಖೆಯೂ ಹಳ್ಳಿಗಳಲ್ಲಿ ಸಮುದಾಯ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಚಿಂತಿಸುತ್ತದೆ. ಆದರೆ ಇಂತಹ ಕೇಂದ್ರಗಳು ಯಾವ ಮಾಹಿತಿ ಎಲ್ಲಿ ದೊರೆಯುತ್ತದೆ, ಕೈಪಿಡಿಗಳೇನಾದರೂ ಇವೆಯೇ ಎಂಬುದನ್ನು ಮಾಹಿತಿ ಕೇಂದ್ರದ ಮೇಲ್ವಿಚಾರಕರು ತಿಳಿಯಲು ಕೂಡ ಜನಪ್ರಿಯ ವಿಜ್ಞಾನ ಗ್ರಂಥಸೂಚಿ ಹಾಗೂ ಲೇಖನಗಳ ಸೂಚಿ ಬೇಕು. ಇಂತಹ ಪ್ರಾಥಮಿಕ ಪರಿಕರಗಳ ಬೆಳವಣಿಗೆಯ ಕಡೆ ಗಮನಹರಿಸದಿದ್ದರೆ ಈ ಎಲ್ಲ ಯೋಜನೆಗಳ ಆಶಯಗಳು ಮಾಹಿತಿಯ ಕೊರತೆಯಿಂದ ಸೊರಗುವುದು ಅನಿವಾರ್ಯವಾಗುತ್ತದೆ.

-----------------------------------------------------------------

* *ವಿಜ್ಞಾನ ಸಂಗಾತಿ,* ಮೆ ೨೦೦೭, ಸಂಪುಟ ೧೨, ಸಂಚಿಕೆ ೦೭, ಪು. ೩೮.

## ಲೇಖಕರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೫ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, 1978 ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್‌ರವರು ನಾಲ್ಕು ಪುಸ್ತಕಗಳು ಹಾಗೂ ೭೪ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದು, ಇದಲ್ಲದೆ ಸುಮಾರು ೨೨ ಲೇಖನಗಳನ್ನು ವಿವಿಧ ಸಮ್ಮೇಳನಗಳಲ್ಲಿ ಮಂಡಿಸಿದ್ದಾರೆ.

**E-mail:** sridharmirle@yahoo.com, mirlesridhar@gmail.com, sridhar@isac.gov.in **; Phone:** 91-80-25084451; **Fax:** 91-80-25084475.